# ಮಾಸ ಭವಿಷ್ಯ

-ಅರುಣ ಪಿ. ಭಟ್



**ಮೇಷ:** ಈ ತಿಂಗಳು ನಿಮಗೆ ಶುಭಕರವಾಗಿದೆ. ಹೊಸ ವಾಹನ, ವಸ್ತುಗಳ ಕ್ರಯ–ವಿಕ್ರಯಗಳಿಗೆ ಸೂಕ್ತ ಕಾಲ. ಸಾಮಾಜಿಕ ಜೀವನದಲ್ಲಿ ಜನತೆಯ ಗೌರವಕ್ಕೆ ಪಾತ್ರರಾಗುವಿರಿ. ಅನಿರೀಕ್ಷಿತ ಧನಲಾಭ. ಕೋರ್ಟ್ ಕಚೇರಿಯ ಕೆಲಸಗಳು ಮಧ್ಯಮ ಗತಿಯಲ್ಲಿ ಸಾಗುತ್ತವೆ. ಶುಭ: 11,23,29. ಅಶುಭ: 15,18,27.

**ವೃಷಭ:** ಆರ್ಥಿಕವಾಗಿ ಉನ್ನತಿಯಾಗುವುದು. ರಾಜಕೀಯ, ಸಾಮಾಜಿಕ ಕ್ಷೇತ್ರದಲ್ಲಿ ಮನ್ನಣೆ. ಕುಟುಂಬದಲ್ಲಿ ಮಂಗಳ ಕಾರ್ಯಗಳು ನಡೆಯುವ ಸಾಧ್ಯತೆ. ಇದರಿಂದ ಕುಟುಂಬದ ವಾತಾವರಣವು ಉತ್ತಮವಾಗಿರುತ್ತದೆ. ಶುಭ: 12,18,26. ಅಶುಭ: 13,27,29.





**ಮಿಥುನ:** ಸಂಬಂಧಿಕರು, ಸ್ನೇಹಿತರು ಮತ್ತು ಆಪ್ತರ ಭೇಟಿ. ಅವರಿಂದ ನಿಮ್ಮ ಕೆಲಸಗಳಿಗೆ ಅನಿರೀಕ್ಷಿತ ಬೆಂಬಲ ದೊರೆತು ನಿಮ್ಮ ಉತ್ಸಾಹ ಇಮ್ಮಡಿಯಾಗುತ್ತದೆ. ನಿಮ್ಮ ಪ್ರವಾಸಗಳು ಕಡಿಮೆ ಇರುತ್ತವೆ ಮತ್ತು ಆರ್ಥಿಕವಾಗಿ ನೀವು ಪ್ರಗತಿ ಹೊಂದುತ್ತೀರಿ. ಶುಭ: 15,18,24 ಅಶುಭ: 14,19,28.

**ಕರ್ಕ:** ಈ ತಿಂಗಳು ನಿಮಗೆ ಮಧ್ಯಮ ಫಲಗಳಿಂದ ಕೂಡಿದೆ. ಕೃಷಿ ಭೂಮಿ ಅಥವಾ ಕೃಷಿ ಸಲಕರಣೆ ವ್ಯವಹಾರದವರಿಗೆ ಲಾಭ. ಉನ್ನತ ಪದವೀಧರರಿಗೆ ವಿದೇಶ ಪ್ರವಾಸ ಯೋಗ. ಕೆಲವರಿಗೆ ಮಧುಮೇಹ, ಮೂತ್ರಸೋಂಕು ಸಂಬಂಧಿತ ಸಮಸ್ಯೆ ಕಾಡಬಹುದು. ಶುಭ: 10,16,25. ಅಶುಭ: 11,18,27.





**ಸಿಂಹ:** ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿ, ಆದಾಯ ವೃದ್ಧಿಯಾಗಲಿದೆ. ವಾಹನ ಚಲಾಯಿಸುವಾಗ ಎಚ್ಚರಿಕೆಯಿಂದ ಇರಿ. ಕೆಲಸದ ಸ್ಥಳದಲ್ಲಿ ನಿಮಗೆ ಉನ್ನತ ಸ್ಥಾನ ಪ್ರಾಪ್ತಿ. ಇದರಿಂದ ಹಿರಿಯ ಅಧಿಕಾರಿಗಳು, ಸಹೋದ್ಯೋಗಿಗಳಿಗೆ ಸಂತಸ. ಪ್ರೇಮಿಗಳಿಗೆ ವಿವಾಹ ಯೋಗ. ಶುಭ: 9,12,23. ಅಶುಭ: 14,16,21.

**ಕನ್ಯಾ:** ಪೋಷಕರ ಆರೋಗ್ಯದಲ್ಲಿ ಏರುಪೇರು ಸಾಧ್ಯತೆ ಇದೆ. ಜಮೀನು ಖರೀದಿ ಸಾಧ್ಯತೆ. ದೊಡ್ಡ ನಿರ್ಧಾರಕ್ಕೂ ಮುನ್ನ ಹಿರಿಯರ ಸಲಹೆ ಅಗತ್ಯ. ಮನೆಯಲ್ಲಿ ಮಂಗಳ ಕಾರ್ಯ ನಡೆಯುವ ಸಂಭವವಿದೆ. ಕುಟುಂಬದ ಸದಸ್ಯರ ನಡುವೆ ಒಗ್ಗಟ್ಟು. ಯಾರಿಗೂ ಸಾಲ ನೀಡದಿರಿ. ಶುಭ: 8,15,21. ಅಶುಭ:12,16,28.





**ತುಲಾ:**ಉದ್ಯೋಗ ಬದಲಿಸುವ ಬಗ್ಗೆ ಯೋಚಿಸುತ್ತಿದ್ದರೆ ಈ ಸಮಯದಲ್ಲಿ ನಿಮ್ಮ ಪ್ರಯತ್ನವನ್ನು ವೇಗಗೊಳಿಸಿ. ನೀವು ಯಶಸ್ವಿಯಾಗುವಿರಿ. ವೆಚ್ಚಗಳ ನಿಯಂತ್ರಣ ಅಗತ್ಯ. ಸರ್ಕಾರಿ ಉದ್ಯೋಗಿಗಳಿಗೆ ಅದೃಷ್ಟದ ಬೆಂಬಲ. ಸರ್ಕಾರದಿಂದ ಮನೆ ಮತ್ತು ವಾಹನವನ್ನು ಪಡೆಯಬಹುದು. ಶುಭ: 13,19,27. ಅಶುಭ: 5,12,29.

**ವೃಶ್ಚಿಕ:** ನಿಮ್ಮ ಆದಾಯವು ನಿರಂತರವಾಗಿ ಹೆಚ್ಚಾಗಲಿದೆ. ವಾಹನ ಅಥವಾ ಮನೆಯನ್ನು ಖರೀದಿಸಲು ನಿರ್ಧಾರ ತೆಗೆದುಕೊಳ್ಳಬಹುದು. ನ್ಯಾಯಾಲಯದಲ್ಲಿ ವಕಾಲತ್ತು ನಿಮ್ಮ ಪರವಾಗುವ ಸಾಧ್ಯತೆ. ಪೂರ್ವಜರ ಆಸ್ತಿ ಮಾರಾಟದಿಂದ ಲಾಭ. ಪೋಷಕರ ಆರೋಗ್ಯ ಸುಧಾರಣೆ. ಶುಭ: 10,17,26. ಅಶುಭ: 12,18,27.





**ಧನು:** ಕಠಿಣ ಪರಿಶ್ರಮ ಪಟ್ಟಲ್ಲಿ ಮಾತ್ರ ಅಪೇಕ್ಷಿತ ಫಲಿತಾಂಶ ಪಡೆಯಲು ಸಾಧ್ಯ. ಉದ್ಯೋಗ ಬದಲಿಸುವವರಿಗೆ ಯಶಸ್ಸು. ಅಪೇಕ್ಷಿತ ವರ್ಗಾವಣೆ ಸಾಧ್ಯತೆ. ಹೊಸ ಹೂಡಿಕೆದಾರರು ಸಿಗುವರು. ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಶುಭ: 11,18,22. ಅಶುಭ: 15,19,23.

**ಮಕರ:** ವಾಹನ ಚಲಾಯಿಸುವಾಗ ಹೆಚ್ಚು ಜಾಗರೂಕತೆ ಅಗತ್ಯ. ಮನೆಯಿಂದ ಹೊರಹೋಗುವಾಗ ಸರಿಯಾಗಿ ಆಹಾರ ಸೇವಿಸಿ. ಉದ್ಯೋಗಿಗಳಿಗೆ ವಿದೇಶ ಪ್ರಯಾಣ ಅವಕಾಶ. ವ್ಯಾಪಾರಸ್ಥರಿಗೆ ಲಾಭ. ಸಮಾಜದಲ್ಲಿ ನಿಮ್ಮ ಗೌರವ ಮತ್ತು ಪ್ರತಿಷ್ಠೆ ಕೂಡ ಬೆಳೆಯುತ್ತದೆ. ಶುಭ: 13,18,28. ಅಶುಭ: 14,19,25.





**ಕುಂಭ:** ಕುಟುಂಬದದಲ್ಲಿ ಒಗ್ಗಟ್ಟು. ತಂದೆ–ತಾಯಿಯ ಜೊತೆ ತೀರ್ಥಯಾತ್ರೆ, ಧಾರ್ಮಿಕ ಕ್ಷೇತ್ರಗಳ ಭೇಟಿ. ಜ್ವರ, ಕೆಮ್ಮು, ಶೀತದಂತಹ ಸಣ್ಣ ಸಮಸ್ಯೆ ಬಾಧಿಸುತ್ತದೆ. ಕೆಲಸದ ಸ್ಥಳದಲ್ಲಿ ಯಶಸ್ಸು. ಸಹೋದ್ಯೋಗಿಗಳು ಮತ್ತು ಹಿರಿಯ ಅಧಿಕಾರಿಗಳಿಂದ ಬೆಂಬಲ. ಶುಭ: 12,19,27. ಅಶುಭ: 10,16,29.

**ಮೀನ:** ನೀವು ಮನೆಗೆ ಅನುಗುಣವಾಗಿ ಖರ್ಚು ವೆಚ್ಚ ಮಾಡುವಿರಿ. ಇದರಿಂದ ಮನೆಯ ಸದಸ್ಯರ ನಡುವೆ ನಿಮ್ಮ ಗೌರವವು ಹೆಚ್ಚಾಗುತ್ತದೆ. ಸಹೋದ್ಯೋಗಿಗಳ ಸಹಾಯದಿಂದ ಅವಕಾಶ ಪಡೆಯುತ್ತೀರಿ. ಹಿರಿಯ ಅಧಿಕಾರಿಗಳು ನಿಮ್ಮ ಬಡ್ತಿಯ ಬಗ್ಗೆ ಆಲೋಚಿಸಬಹುದು. ಶುಭ: 10,14,28. ಅಶುಭ: 12,19,27.

